**ಕರ್ನಾಟಕ ಸರ್ಕಾರ**

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ಹ.ಬ.ವಿವಾದ: 139/2014-15 ದಿ: 27-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ದಣ್ಣೆ ಅಂಬಣ್ಣ ತಂದೆ: ದಣ್ಣೆ ಮುಕ್ಕಣ್ಣ
ಕೆ.ಬೆಳಗಲ್ ಗ್ರಾಮ, ಸಿರುಗುಪ್ಪ ತಾಲೂಕ
2) ದಣ್ಣೆ ಯಲ್ಲಮ್ಮ ಗಂಡ: ಲೇಟ್ ಮಲ್ಲಯ್ಯ
ಕೆ. ಬೆಳಗಲ್ ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಶಿವಮ್ಮ
ತಂದೆ: ದಣ್ಣೆ ಪೊಂಪಣ್ಣ
ಕೆ.ಬೆಳಗಲ್ ಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ಪಹಿವಾಡು ಸಂಖ್ಯೆ |
|---|---|---|---|---|
| ಕಂಚಿಗಾರ ಬೆಳಗಲ್ ಗ್ರಾಮ | 389/B1 | 2-73 | H-152/2013-14 | 353/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ ಕೆ. ಬೆಳಗಲ್ ಗ್ರಾಮದ ಸ.ನಂ. **389/B1** ವಿಸ್ತೀರ್ಣ **2-73** ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ** ರಂದು **ದಣ್ಣೆ ಅಂಬಣ್ಣ ತಂದೆ: ದಣ್ಣೆ ಮುಕ್ಕಣ ಹೆಸರಿನಲ್ಲಿ 1-37 ಸೆಂಟ್ಸ್ ಮತ್ತು ದಣ್ಣೆ ಯಲ್ಲಮ್ಮ ಗಂಡ: ಲೇಟ್ ಮಲ್ಲಯ್ಯ ಇವರ ಹೆಸರಿನಲ್ಲಿ 1-36 ಸೆಂಟ್ಸ್** ಜಮೀನು ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಶಿವಮ್ಮ ತಂದೆ: ದಣ್ಣೆ ಪೊಂಪಣ್ಣ , ಕೆ.ಬೆಳಗಲ್ ಗ್ರಾಮ ಇವರು ದಿ:16-6-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:14-8-2015, 24-10-2015, 8-3-2016 11-3-2016, 28-3-2016, 29-4-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳಾದ ದಣ್ಣಿ ಅಂಬಣ್ಣ ತಂದೆ: ಲೇಟ್ ದಣ್ಣಿ ಮುಕ್ಕಣ್ಣ, ಮತ್ತು • ದಣ್ಣಿ ಯಲ್ಲಮ್ಮ ಗಂಡ: ಲೇಟ್ ...ಯ್ಯ ಕೆ.ಬೆಳಗಲ್‌ಗ್ರಾಮ ಇವರು ಕೆ.ಬೆಳಗಲ್‌ಗ್ರಾಮದ ಸ.ನಂ. **389 B/1** ವಿಸ್ತೀರ್ಣ 1–37 ಸೆಂಟ್ಸ್ ಮತ್ತು 1–36 ...ರೆ ದಣ್ಣಿ ಅಂಬಣ್ಣ ತಂದೆ: ಲೇಟ್ ದಣ್ಣಿ ಮುಕ್ಕಣ್ಣ, ಮತ್ತು ದಣ್ಣಿ ಯಲ್ಲಮ್ಮ ಗಂಡ: ಲೇಟ್ ಮಲ್ಲಯ್ಯ ಕೆ.ಬೆಳಗಲ್‌ಗ್ರಾಮ ಇವರಿಗೆ ಕ್ರಮವಾಗಿ 1–37 ಸೆಂಟ್ಸ್ ಮತ್ತು 1–36 ಸೆಂಟ್ಸ್ ಜಮೀನು ಪೋತಿ ಆಧಾರದ ಮೇರೆಗೆ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ಶ್ರೀಮತಿ: ಶಿವಮ್ಮ ತಂದೆ: ದಣ್ಣಿ ಪೊಂಪಣ್ಣ ಕೆ.ಬೆಳಗಲ್ ಗ್ರಾಮ ಇವರು ತಮಗೂ ಪಾಲು ಬರಬೇಕೆಂಬ ಕಾರಣಕ್ಕೆ ದಿ:16–6–2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಪ್ರಕಾರ ಇವರಿಗೆ ಕೆ. ಬೆಳಗಲ್ ಗ್ರಾಮದ ಸ.ನಂ. 436ಬಿ ಪೈಕಿ 3–00 ಎಕರೆ ಮತ್ತು 193 ಸಿ ಪೈಕಿ 0–56 ಸೆಂಟ್ಸ್ ಜಮೀನು ಬಿಟ್ಟುಕೊಡುವುದಾಗಿ ಪರಿಷ್ಕಾರ ಮಾಡಿದ ಪ್ರಕಾರ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುವುದಾಗಿ ಕೆ.ಬೆಳಗಲ್ ಗ್ರಾಮದ ಸ.ನಂ. **389 B/1** ವಿಸ್ತೀರ್ಣ 1–37 ಸೆಂಟ್ಸ್ ಮತ್ತು 1–36 ಎಕರೆ ಜಮೀನು ಕ್ರಮವಾಗಿ ನಮ್ಮ ಇಬ್ಬರ ಹೆಸರಿನಲ್ಲಿ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

<u>ಪ್ರತಿವಾದಿಗಳು</u>

ಪ್ರತಿವಾದಿಗಳಾದ ಶಿವಮ್ಮ ತಂಧೆ: ದಣ್ಣಿ ಪೊಂಪಣ್ಣ ಕೆ.ಬೆಳಗಲ್‌ಗ್ರಾಮ ಇವರು ಕೆ.ಬೆಳಗಲ್ ಗ್ರಾಮದ ಸ.ನಂ. **389 B/1** ವಿಸ್ತೀರ್ಣ 1–37 ಸೆಂಟ್ಸ್ ಮತ್ತು 1–36 ಎಕರೆ ದಣ್ಣಿ ಈರಣ್ಣ ತಂದೆ: ದಣ್ಣಿ ಮುಕ್ಕಣ್ಣ ಇವರ ಹೆಸರಿನಲ್ಲಿ ಇದ್ದು ದಣ್ಣಿ ಅಂಬಣ್ಣ ತಂದೆ: ಲೇಟ್ ದಣ್ಣಿ ಮುಕ್ಕಣ್ಣ, ಮತ್ತು ದಣ್ಣಿ ಯಲ್ಲಮ್ಮ ಗಂಡ: ಲೇಟ್ ಮಲ್ಲಯ್ಯ ಕೆ.ಬೆಳಗಲ್‌ಗ್ರಾಮ ಇವರ ಹೆಸರಿಗೆ ಪಟ್ಟ ವರ್ಗಾವಣೆ ಸಮಯದಲ್ಲಿ ನಾನು ತಕರಾರು ಅರ್ಜಿ ದಿ:16–6–2014 ರಂದು ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಮಾಡಿದ ಪ್ರಕಾರ ಕೆ.ಬೆಳಗಲ್ ಗ್ರಾಮದ ಸ.ನಂ.436ಬಿ ಪೈಕಿ 3–00 ಎಕರೆ ಮತ್ತು 193ಸಿ ಪೈಕಿ 0–56 ಸೆಂಟ್ಸ್ ಜಮೀನು ಬಿಟ್ಟುಕೊಡುವುದಾಗಿ ಪರಿಷ್ಕಾರ ಮಾಡಿದ ಪ್ರಕಾರ ನನ್ನ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ದಣ್ಣಿ ಅಂಬಣ್ಣ ತಂದೆ: ಲೇಟ್ ದಣ್ಣಿ ಮುಕ್ಕಣ್ಣ, ಮತ್ತು ದಣ್ಣಿ ಯಲ್ಲಮ್ಮ ಗಂಡ: ಲೇಟ್ ಮಲ್ಲಯ್ಯ ಕೆ.ಬೆಳಗಲ್‌ಗ್ರಾಮ ಇವರ ಹೆಸರಿಗೆ ಕ್ರಮವಾಗಿ ಸ.ನಂ. **389 B/1** ವಿಸ್ತೀರ್ಣ 1–37 ಸೆಂಟ್ಸ್ ಮತ್ತು 1–36 ಎಕರೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು **ಪೋತಿ ವಾರಸತ್ವದ ಪಾಲುವಿಭಾಗ ಪತ್ರ ಪ್ರಕಾರ** ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## <u>ಆದೇಶ</u>

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕೆ.ಬೆಳಗಲ್ ಗ್ರಾಮದ ಸ.ನಂ. **389 B/1** ವಿಸ್ತೀರ್ಣ 1–37 ಸೆಂಟ್ಸ್ ಮತ್ತು 1–36 ಎಕರೆ ಜಮೀನು ಪೋತಿ ವಾರಸತ್ವದ ಪಾಲು ವಿಭಾಗ ಪತ್ರದ ಪ್ರಕಾರ ಕ್ರಮವಾಗಿ ದಣ್ಣಿ ಅಂಬಣ್ಣ ತಂದೆ: ದಣ್ಣಿ ಮುಕ್ಕಣ್ಣ ಹೆಸರಿಗೆ 1–37 ಸೆಂಟ್ಸ್ ಮತ್ತು ದಣ್ಣಿ ಯಲ್ಲಮ್ಮ ಗಂಡ: ಲೇಟ್ ಮಲ್ಲಯ್ಯ ಇವರ ಹೆಸರಿಗೆ 1–36 ಸೆಂಟ್ಸ್ ಜಮೀನು ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:[illegible]–05–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು
ಭೂಮಿ ... ಕರೂ...
ಕಛೇರಿ ಸಿರುಗುಪ್ಪ

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.